ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD
Malleshwaram, Bengaluru – 560 003

2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -1
S.S.L.C. MODEL QUESTION PAPER-1 : 2024-25

ವಿಷಯ : ಪ್ರಥಮ ಭಾಷೆ — ಕನ್ನಡ
Subject : First Language — KANNADA

ವಿಷಯ ಸಂಕೇತ : 01-K | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು] | [Time : 3 Hours 15 Minutes

ಗರಿಷ್ಠ ಅಂಕಗಳು : 100] | [Max. Marks : 100

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[Turn over

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 6 × 1 = 6

1. ಕನ್ನಡ ವರ್ಣಮಾಲೆಯ ವರ್ಗದ ಪಂಚಮಾಕ್ಷರಗಳು

   (ಎ) ಅಲ್ಪಪ್ರಾಣಾಕ್ಷರ

   (ಬಿ) ಮಹಾಪ್ರಾಣಾಕ್ಷರ

   (ಸಿ) ಅನುನಾಸಿಕ

   (ಡಿ) ಯೋಗವಾಹಗಳು

2. ಪಂಚಮೀ ವಿಭಕ್ತಿಯ ಕಾರಕಾರ್ಥವಿದು

   (ಎ) ಸಂಪ್ರದಾನ

   (ಬಿ) ಅಪಾದಾನ

   (ಸಿ) ಅಧಿಕರಣ

   (ಡಿ) ಕರಣಾರ್ಥ

3. ದೇವರು ನಿಮಗೆಲ್ಲರಿಗೂ ಶುಭವನ್ನುಂಟು <u>ಮಾಡಲಿ</u> – ಗೆರೆ ಎಳೆದ ಪದದ ಕ್ರಿಯಾರೂಪ

   (ಎ) ವಿಧ್ಯರ್ಥಕ

   (ಬಿ) ಸಂಭಾವನಾರ್ಥಕ

   (ಸಿ) ನಿಷೇಧಾರ್ಥಕ

   (ಡಿ) ಆತ್ಮಾರ್ಥಕ

4. ಬಹುವ್ರೀಹಿ ಸಮಾಸದ ಪದವಿದು

   (ಎ) ಮುಕ್ಕಣ್ಣು

   (ಬಿ) ಕಡೆಗಣ್ಣು

   (ಸಿ) ಕಂಗೆಡು

   (ಡಿ) ಚಕ್ರಪಾಣಿ

5. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು

(ಎ) ಸಾಮಾನ್ಯ ವಾಕ್ಯ

(ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಯ

(ಡಿ) ಪ್ರಶ್ನಾರ್ಥಕ ವಾಕ್ಯ

6. 'ತರುವಾಯ' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ

(ಎ) ಅವಧಾರಣಾರ್ಥಕಾವ್ಯಯ

(ಬಿ) ಅನುಕರಣಾವ್ಯಯ

(ಸಿ) ಸಾಮಾನ್ಯಾರ್ಥಕಾವ್ಯಯ

(ಡಿ) ಕ್ರಿಯಾರ್ಥಕಾವ್ಯಯ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4

7. ವೈಶಾಖ : ಬೇಸಗೆ :: ಪ್ರತೀಹಾರಿ : ....

8. ಚೆಲುವಿಕೆ : ತದ್ಧಿತಾಂತ ಭಾವನಾಮ :: ತಿನ್ನುವಿಕೆ : ....

9. ಮಕ್ಕಳುಮರಿ : ಜೋಡುನುಡಿ :: ಬಟ್ಟಬಯಲು : ....

10. ಮನುಷ್ಯ : ರೂಢನಾಮ :: ಪೂಜಾರಿ : ....

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 7 × 1 = 7

11. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?

12. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

13. ಗಡಿ ಪ್ರದೇಶಗಳಲ್ಲಿ 'ಬ್ಲಾಕ್ ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?

14. ಕಾಶ್ಯಪಿ ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು ?

15. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು ?

16. ದ್ರೋಣನು ಪರಶುರಾಮರ ಬಳಿಗೆ ಏಕೆ ಬಂದನು ?

17. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಬ್ರಿಟಿಷ್ ಅಧಿಕಾರಿಯ ಹೆಸರೇನು ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

18. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳಾವುವು ?

19. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು ನಿರಾಶೆಯಿಂದ ಹೇಳಿದ ಮಾತುಗಳಾವುವು ?

20. ಲಕ್ಷ್ಮಣನು ಅಣ್ಣನಾದ ರಾಮನನ್ನು ಸಂತೈಸಿದ ಬಗೆ ಹೇಗೆ ?

21. ಶಬರಿಯು ರಾಮನ ಸ್ವಾಗತಕ್ಕಾಗಿ ಮಾಡಿಕೊಂಡಿದ್ದ ಸಿದ್ಧತೆಗಳನ್ನು ತಿಳಿಸಿ.

22. ಕರ್ಣನು ಯುದ್ಧದ ವಿಚಾರದಲ್ಲಿ ಕೈಗೊಂಡ ತೀರ್ಮಾನವನ್ನು ಬರೆಯಿರಿ.

23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು ?

24. ಪುಟ್ಟಪೋರಿ ಏಕೆ ಮೂಕವಿಸ್ಮಿತಳಾಗಿದ್ದಾಳೆ ?

25. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು ?

26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ ?

27. ಶುಕನಾಸನು ತಿಳಿಸಿರುವಂತೆ ರಾಜರ ಪ್ರಕೃತಿಯನ್ನು ಕುರಿತು ಬರೆಯಿರಿ.

V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6

28. ದೇವನೂರ ಮಹಾದೇವ

29. ಲಕ್ಷ್ಮೀಶ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

30. ಭಾನುವೆ ಸಾಲದೆ ಪಗಲೆನಿ

ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3

31. ''ನನ್ನ ಧೈರ್ಯದ ಭೂಮಿ ಕಾಲಡಿಯೆ ಕುಸಿಯುತಿದೆ''

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 × 3 = 3

32. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.

ಅಥವಾ

ಆಳಾಗಬಲ್ಲವನು; ಅರಸಾಗಬಲ್ಲನು.

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18

33. ''ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.''

34. ''ಮನುಷ್ಯನಂತೆ ಟೊಪ್ಪಿಗೆಯಲ್ಲವೆ ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ.''

35. ''ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ.''

36. ''ಹೊಸ ಎಚ್ಚರದೊಳು ಬದುಕೋಣ.''

37. ''ಕೌಂತೇಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ.''

38. ''ಬೇರೆ ಬಣ್ಣವನೆ ಕಾಣೆ.''

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4

39. ಕೊಡಲಿ ....

....

....

.... ನಾನೆಷ್ಟಾ

ಅಥವಾ

ಸಿಕ್ಕದ್ದು ....

....

....

.... ಜನಕಾ

XI. ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :

1 × 4 = 4

40. ಯುಗ-ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ ?

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

41. ಭಾಷೆ ಸತ್ವಪೂರ್ಣವಾಗಿ ಹೇಗೆ ವಿಕಾಸಗೊಳ್ಳುತ್ತದೆ ? ವಿವರಿಸಿ.

ಅಥವಾ

ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಕುರಿತು ವಿವರಿಸಿ.

ಅಥವಾ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

$1 \times 4 = 4$ (2 + 2)

43. ಸಾಮಾನ್ಯವಾಗಿ ವಿದ್ಯಾರ್ಥಿಗಳು ತಮ್ಮ ವಿಷಯಗಳನ್ನು ಕೆಲವು ಕಷ್ಟವಾದವು, ಕೆಲವು ಸುಲಭವಾದವು ಎಂದು ಭಾವಿಸುತ್ತಾರೆ. ಅದು ಒಳ್ಳೆಯದಲ್ಲ. ಅದಕ್ಕೆ ಕಾರಣ ಏನೇ ಇರಬಹುದು. ನಿಮ್ಮ ಶಿಕ್ಷಕರು ಆ ವಿಷಯ ಕಷ್ಟವೆಂದು ಹೇಳಿರಬಹುದು. ಇಲ್ಲವೆ ನಿಮ್ಮ ಗೆಳೆಯರು "ಆ ವಿಷಯ ಮಹಾಕಷ್ಟ, ಕಬ್ಬಿಣದ ಕಡಲೆಯಂತೆ ಕಠಿಣ" ಎಂದು ನಾಲ್ಕಾರು ಬಾರಿ ಹೇಳಿರಬಹುದು ಅಥವಾ ಆ ವಿಷಯದಲ್ಲಿ ಬಹಳ ಕಡಿಮೆ ಅಂಕ ಬಂದಿರಲೂಬಹುದು. ಈ ಮೂರು ಅಲ್ಲದೆ ಬೇರೆ ಕಾರಣಗಳು ಇರಬಹುದು. ಹೇಗೋ ಆ ವಿಷಯ ಕಷ್ಟವಾದದ್ದು ಎಂಬ ಭಾವನೆಯಿಂದ ಹೊರಬನ್ನಿ. ಏಕೆಂದರೆ ನಿಜವಾಗಿಯೂ ಅದು ಕಷ್ಟವಾಗಿದ್ದರೆ ಉಳಿದ ವಿದ್ಯಾರ್ಥಿಗಳಿಗೂ ಕೂಡಾ ಆ ಸಮಸ್ಯೆ ಇರುತ್ತಿತ್ತು. ಆದರೆ ಅವರು ಹಾಗೆ ಹೇಳುವುದಿಲ್ಲ. ಅಷ್ಟೇ ಏಕೆ ಅದರಲ್ಲೆ ಹೆಚ್ಚು ಅಂಕಗಳನ್ನು ಗಳಿಸುತ್ತಾರೆ. ಆದುದರಿಂದ ನೀವು ಅಂತಹ ಆಲೋಚನೆಯಿಂದ ಹೊರಬರಲು ಪ್ರಯತ್ನಿಸಬೇಕು. ಆ ವಿಷಯದ ಬಗೆಗಿರುವ ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು ಇದು ಬಳ ಆಸಕ್ತಿಯುತವಾದ ವಿಷಯ. ಸ್ವಲ್ಪ ಶ್ರಮವಹಿಸಿದರೆ ಆ ವಿಷಯ ಅರ್ಥಮಾಡಿಕೊಳ್ಳಬಹುದು. ಉಳಿದ ವಿಷಯಗಳಿಗಿಂತ ಸ್ವಲ್ಪ ಹೆಚ್ಚು ಸಮಯವನ್ನು ನಿಗದಿಗೊಳಿಸಿ ಓದಿದರೆ ಅರ್ಥವಾಗುತ್ತದೆ. ಮತ್ತೆ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡು ಪುನರಾವರ್ತನೆ ಮಾಡಿದರೆ ಅದರಲ್ಲೂ ಉತ್ತಮ ಫಲಿತಾಂಶ ಸಾಧಿಸಬಲ್ಲೆ ಎಂದು ಪ್ರಯತ್ನಿಸಬೇಕು. ಆಗ ಆ ವಿಷಯವು ಕೂಡ ಕರತಲಾಮಲಕವಾಗುತ್ತದೆ. ಹಾಗೆ ಆಯಾ ವಿಷಯದ ಕುರಿತು ಆಲೋಚಿಸದೆ ಇದ್ದರೆ, ಪುನರಾವರ್ತನೆ ಮಾಡದೆ, ಪ್ರಯೋಗಶೀಲರಾಗದೆ ಹೋಗಿದ್ದರೆ ಥಾಮಸ್ ಅಲ್ವಾ ಎಡಿಸನ್, ಐನ್‌ಸ್ಟಿನ್‌ನಂತಹ ವಿಜ್ಞಾನಿಗಳು ಯಶಸ್ಸು ಸಾಧಿಸುತ್ತಿರಲಿಲ್ಲ.

ಪ್ರಶ್ನೆಗಳು :

ಅ) ವಿದ್ಯಾರ್ಥಿಗಳು ಕಷ್ಟದ ವಿಷಯಗಳಲ್ಲಿ ಹೆಚ್ಚು ಅಂಕಗಳಿಸಲು ಹೇಗೆ ಪ್ರಯತ್ನಿಸಬೇಕು ?

ಬ) ಕೆಲವು ವಿಷಯಗಳು ಕಷ್ಟಕರ ಎಂಬ ಆಲೋಚನೆ ಬರಲು ಕಾರಣವೇನು ?

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5

44. ನಿಮ್ಮನ್ನು ದಾವಣಗೆರೆ ಜಿಲ್ಲೆಯ ಮಳಲಕೆರೆ ಗ್ರಾಮದ ನಿವಾಸಿ 'ಅನುಷಾ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಆರಂಭಿಸುವಂತೆ ಕೋರಿ ಮಾನ್ಯ 'ಶಿಕ್ಷಣ ಸಚಿವರಿಗೆ' ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಧುಗಿರಿಯ ಸರ್ಕಾರಿ ಪ್ರೌಢಶಾಲೆಯ 'ನವೀನ್' ಎಂದು ಭಾವಿಸಿಕೊಂಡು, 'ರಾಷ್ಟ್ರೀಯ ಪೋಷಣ್ ಅಭಿಯಾನ ಕಾರ್ಯಕ್ರಮ'ದ ಮಹತ್ತ್ವವನ್ನು ಕುರಿತು ಮೈಸೂರಿನಲ್ಲಿ ವಾಸವಾಗಿರುವ ಗೆಳತಿ 'ಸವಿತಾ'ಳಿಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :

1 × 5 = 5

45. ರಾಷ್ಟ್ರೀಯ ಭಾವೈಕ್ಯ ಬೆಳೆಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ.

ಅಥವಾ

ಸಾಮಾಜಿಕ ಜಾಲತಾಣಗಳ ಸದ್ಬಳಕೆ.